ಮೈಸೂರ ಗೆಜೆಟ

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಡಿಕಂಬರ್ ತಾ॥ 20, ಸ್ಯ 1884.

ಗಮನಿಕೆ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ಗಿರುವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜ್ಯೂಡಿಷಿಯಲ್ ಇಲಾಖಾ

ಇಸ್ತಿಹಾರ್ ನಾಮೆ.

ತಾರೀಖೀ 9ನೇ ಡಿಕಂಬರ್ 1884.

ಶ್ರೀಮನ್ಮಹಾರಾಜ ರಾಜಾಸಾಹೆಬರವರ ಮಂಜೂರಾತಿನಿಶಿ, ಇದರಡೀಕಂಡ ಸ್ಯ 1885ನೇ ಇಸವಿಯ ಕೋರ್ಟು ರಜಾಪಟ್ಟಿಯು ಸರ್ವರ ತಿಳುವಳಿಕೆಯ ಬಗ್ಯೆ ಫಾಯಿಷ್ ಮಾಡಲ್ಪಟ್ಟಿರುತ್ತೆ.

ಈ ಸೀಮೆಯ ದರೋಬಸ್ತು ಸಿವಿಲ್ ಕೋರ್ಟುಗಳಲ್ಲಿಯೂ ಸದರೀ ದಿವಸಗಳನ್ನು ಪೂರಾ ರಜಾದಂತೆ ಆಚರಿಸತಕ್ಕದ್ದು.

ರಜಾ ದಿವಸಗಳ ಪಟ್ಟಿ.

ಜನವರೀ 1ರ ಲಾಗಾಯತು 3ರ ವರಿಗೆ ಯರಡು ದಿವಸಗಳೂ ಸೇರಿ	ಕ್ರಿಸ್ಟ್ಮಸ್ ರಜಾದಿನಗಳು
ಡಿಟೋ 12 ಮತ್ತು 13	ಪೊಂಗಲ್
ಫಿಬ್ರವರಿ 13	ಶಿವರಾತ್ರಿ
ಡಿಟೋ 18	ಬೂದೀಬುಧವಾರ
ಡಿಟೋ 19	ಮಹಾರಾಜ ರಾಜಾಸಾಹೇಬರವರ ವರ್ಧಂತಿ
ಡಿಟೋ 28	ಹೋಳೀ ಹಬ್ಬ
ಮಾರ್ಚಿ 17	ಯುಗಾದಿ
ಡಿಟೋ 24	ಶ್ರೀರಾಮನವಮಿ
ಡಿಟೋ 25	ಮಹಾರಾಜ ರಾಜಾಸಾಹೇಬರ ಪಟ್ಟಾಭಿಷೇ ಕೋತ್ಸವ ದಿನ
ಏಪ್ರಿಲ್ 2ರ ಲಾಗಾಯತು 7ರ ವರಿಗೆ ಎರಡುದಿನಗಳೂ ಸೇರಿ	ಈಸ್ಟರ್ ರಜಾದಿನನಗಳು
ಡಿಟೋ 8ರ ಲಾಗಾಯತು ಮೇ 19ರ ವರಿಗೆ ಎರಡುದಿನಗಳೂ ಸೇರಿ	6 ವಾರಗಳ ಕೋರ್ಟು ಸಾಲೀಯಾನಾ ಮೋ ಕಳೀ ದಿವಸಗಳು
ಮೇ 25	ಚಕ್ರವರ್ತಿನೀಯವರ ವರ್ಧಂತಿ
ಆಗಸ್ಟ್ 25	ಶ್ರಾವಣಿ

ಸೆಪ್ಟಂಬರ್ 11	ಗೌರೀ ಹಬ್ಬ
ಡಿಟೋ 12	ಗಣೇಶನ ಹಬ್ಬ
ಡಿಟೋ 23	ಅನಂತ ಚತುರ್ದಶಿ
ಅಕ್ಟೋಬರ್ 8	ಮಹಾಲಯ ಅಮವಾಸ್ಸೆ
ಡಿಟೋ 9	ದಸರಾ ಆರಂಭ
ಡಿಟೋ 17	ಮಹಾನವಮಿ
ನವಂಬರ್ 5	ದೀಪಾವಳಿ
ಡಿಟೋ 7	ಬಲಿಪಾಡ್ಯ
ಡಿಟೋ 9	ಪ್ರಿನ್ಸ್ ಆಫ್ ವೇಲ್ಸ್‌ಯವರ ವರ್ಧಂತಿ
ಡಿಶಂಬರ್ 23ರ ಲಾಗಾಯತು 31ರ ವರಿಗೆ ಎಡಬುದಿನಗಳೂ ಸೇರಿ	ಕ್ರಿಸ್ಟ್‌ಮಸ್ ರಜಾದಿನಗಳು

ಸಂವತ್ಸರದ ತಮೂಂ ಭಾನುವಾರಗಳು.

ಪರಾ—ವಿಜಯ ದಶಮೀ ಹಬ್ಬವು ಭಾನುವಾರವಾದ್ದರಿಂದ ಇದರಲ್ಲಿ ಬಿಟ್ಟಿದೆ.

ಅನ್ಸೆರ್ಟೆರ್ಟ್ ದಿನವು ಸಾಲಿಯೂನಾ ಕೋರ್ಟು ವೊಕಳೀ ದಿನಗಳಲ್ಲಿ ಬರುವದ್ದರಿಂದ ಅದನ್ನು ಸಹ ಯಿಲ್ಲಿ ಬಿಟ್ಟು ಯಿದೆ.

'ಹುಕ್ಕುಂ ಬವೋಜೀಬ್'
ಎಸ್. ಹೇವೂಜಿರಾವ್,
ರಿಜಿಸ್ಟ್ರಾರ್.

ಫಿನಾರ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡಿ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಚ್ಛೈವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇನ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವರು ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಪ್ಯಾಯ್ಬಲ್ ಕೇಟೂದ ಡಿವಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇನ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸರ್ಸ್,
ಕಾಂಪ್ಟ್ರೋಲರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 16ನೇ ಡಿಶಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನ ಮಿನಲ್ ಸೆಷನ್‌ಗಳು 1885ನೇ ಇಸವಿಯ ಇದರಡಿ ಕಂಡ ತಾರೀಖುಗಳಲ್ಲಿ ಮೈಸೂರಲ್ಲಿ ನಡೆಯುವವು:—

ಜನವರಿ	14ನೇ ಬುಧವಾರ	ಆಗಸ್ಟು	10ನೇ ಸೋಮವಾರ
ಫೆಬ್ರವರಿ	9ನೇ ಸೋಮವಾರ	ಸೆಪ್ಟಂಬರ್	14ನೇ ಡಿಟೋ
ಮಾರ್ಚಿ	9ನೇ ಡಿಟೋ	ಅಕ್ಟೋಬರ್	12ನೇ ಡಿಟೋ
ಮೇ	26ನೇ ಮಂಗಳವಾರ	ನವಂಬರ್	10ನೇ ಮಂಗಳವಾರ
ಜೂನ್	8ನೇ ಸೋಮವಾರ	ಡಿಶಂಬರ್	7ನೇ ಸೋಮವಾರ
ಜುಲೈ	13ನೇ ಡಿಟೋ		